ನಿಮಿಷ ಜಾಸ್ತಿಯಾಗಿದೆ. ನೋಡೋಣ ಮುಂದಿನ ಮುರ್ನಾಲ್ಕು ದಿವಸಗಳಲ್ಲಿ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ಎಲ್ಲಾ ಪ್ರಮುಖವಾದ ಪ್ರಶ್ನೆಗಳು. ನಮ್ಮ ರೂಲ್ಸ್ ಪ್ರಕಾರ ಯಾರು ಪ್ರೆಸೆಂಟ್ ಇರುತ್ತಾರೋ ಅವರ ಪ್ರಶ್ನೆಗಳನ್ನು ಮೊದಲು ತೆಗೆದುಕೊಳ್ಳಬೇಕು. ಈಗಾಗಲೇ ಪ್ರಶ್ನೋತ್ತರ ವೇಳೆ 5 ನಿಮಿಷ ಜಾಸ್ತಿಯಾಗಿದೆ. ಮುಂದೆ ನೋಡೋಣ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:- ಮಾನ್ಯ ಅಧ್ಯಕ್ಷರೆ, ನನ್ನ ತಡೆಹಿಡಿಯಲಾದ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು:- ಬನ್ನಿ ನನ್ನ ಛೇಂಬರ್‌ನಲ್ಲಿ ಮಾತನಾಡೋಣ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:- ತಮ್ಮ ಕೊಠಡಿಗೆ ಬಂದು ಕೇಳಿ ಆಯಿತು ಅಧ್ಯಕ್ಷರೆ, ತಾವು ದಯವಿಟ್ಟು ಆ ಪ್ರಶ್ನೆಗೆ ಉತ್ತರವನ್ನು ಕೊಡಿಸುವ ಪ್ರಯತ್ನ ಮಾಡಿ.

ಅಧ್ಯಕ್ಷರು:- ಯಾರ್ಯಾರ ಪ್ರಶ್ನೆಗೆ ಉತ್ತರಗಳು ಬಂದಿಲ್ಲವೋ ಇವತ್ತು ಸಂಜೆ ಸಂಬಂಧಪಟ್ಟ ಅಧಿಕಾರಿಗಳಿಗೆ ಫೋನ್ ಮಾಡಿಸುತ್ತೇನೆ. ಎಷ್ಟು ಪ್ರಶ್ನೆಗಳಿಗೆ ಉತ್ತರ ಬರುತ್ತದೆ ಅಷ್ಟನ್ನು ನಾನು ಕೊಡಿಸುವ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:- ತಾವು ಆ ತರಹ ಅಸಹಾಯಕತೆಯನ್ನು ತೋಡಿಕೊಂಡರೆ ಹೇಗೆ ಅಧ್ಯಕ್ಷರೆ?

ಅಧ್ಯಕ್ಷರು:- ಉತ್ತರಗಳು ಬರಬೇಕಲ್ಲಾ, ಸರ್ಕಾರವನ್ನು ನಾನು ಚಾವಟಿ ಹಿಡಿದು ಹೊಡೆಯುವುದಕ್ಕಾಗುತ್ತದೆಯೆ?

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:- ತಾವು ಈ ತರಹ ಅಸಹಾಯಕತೆಯನ್ನು ತೋಡಿಕೊಂಡರೆ ನಾವೇನು ಮಾಡಬೇಕು? ತಾವು ಉತ್ತರಗಳನ್ನು ತರಿಸಬೇಕು. ತರಿಸಿಕೊಡುತ್ತೇನೆಂದು ತಾವು ಹೇಳಿದಿರಿ.

ಅಧ್ಯಕ್ಷರು:- ನಾಳೆ ತರಿಸೋಣ. ಮಾನ್ಯ ಶಿವಾನಂದ ಪಾಟೀಲ್‌ರು ಏನೋ ಕ್ಲಾರಿಫಿಕೇಶನ್ ಕೇಳುತ್ತಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್:- ನಾನು ಕಳೆದ ಸಲ ಡಿಮಾಂಡ್ಸ್ ಮೇಲೆ ಮಾತನಾಡುವುದಕ್ಕೆ ವಿನಂತಿಸಿಕೊಂಡಿದ್ದೆ. ಇದು ಇನ್ ಜನರಲ್ ಕ್ವೆಶ್ಚನ್. ಅಲ್ಲಿ ಮೈನರ್ ಇರಿಗೇಷನ್‌ನಲ್ಲಿ ಏನಾಗುತ್ತದೆಂದರೆ.....

ಅಧ್ಯಕ್ಷರು:- ನಾಳೆ ಸಪ್ಲಿಮೆಂಟರಿ ಡಿಮಾಂಡ್ಸ್ ಬರುತ್ತದೆ ಯಾವುದಾದರೂ ಸಬ್ಜೆಕ್ಟ್ ಇರುತ್ತದೆ ಆಗ ಮಾತನಾಡಿ. ಸುಮಾರು 60-70 ಹೊಸ ಬೇಡಿಕೆಗಳು ಇವೆ, ಅದರ ಬಗ್ಗೆ ಮಾತನಾಡಿ. ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಎರಡು ರಿಪೋರ್ಟ್‌ಗಳನ್ನು ಸಬ್‌ಮಿಟ್ ಮಾಡುವುದು ಬಾಕಿಯಿದೆ.

8) ವರದಿಗಳನ್ನೊಪ್ಪಿಸುವುದು

ಶ್ರೀ ಎನ್.ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು):- ಮಾನ್ಯ ಅಧ್ಯಕ್ಷರೆ, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ ಅಧ್ಯಕ್ಷರ ಪರವಾಗಿ 2001-02ನೇ ಸಾಲಿನ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 20ನೆಯ ವರದಿಯನ್ನು ಸಮಿತಿಯ ಅಧ್ಯಕ್ಷರ ಪರವಾಗಿ ನಾನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ(ಶ್ರೀರಂಗಪಟ್ಟಣ):– ಮಾನ್ಯ ಅಧ್ಯಕ್ಷರೆ, 2001-02ನೇ ಸಾಲಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 15ನೆಯ ವರದಿ ಹಾಗೂ 14ನೇ ವರದಿಯ ಶಿಫಾರಸ್ಸುಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳ ಮೇಲಿನ ವರದಿಗಳನ್ನು ಸಮಿತಿಯ ಅಧ್ಯಕ್ಷಳಾದ ನಾನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು:– ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಗಳ ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:– ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರ ವಿಧೇಯಕವನ್ನು ಮಂಡಿಸಲಿಕ್ಕೆ ಅವಕಾಶ ಮಾಡಿಕೊಡಿ ಮಂಡಿಸಿದರೆ ಆಯಿತು. ಮಂಡಿಸದಿದ್ದರೆ ಅದು ಲ್ಯಾಪ್ಸ್ ಆಗುತ್ತದೆ. ಖಾಸಗಿ ಸದಸ್ಯರ ವಿಧೇಯಕ ಇದೆ ಅದಕ್ಕೋಸ್ಕರ ಹೇಳುತ್ತಿದ್ದೇನೆ. ಈಗ ಮಂಡಿಸದಿದ್ದರೆ ನಾವು ಪುನಃ ಮಂಡಿಸಲಿಕ್ಕೆ ಸೆಪರೇಟ್ ಅಪ್ಲಿಕೇಷನ್ ಕೊಡಬೇಕು. ಮಂಡಿಸಿಬಿಟ್ಟರೆ ಆಮೇಲೆ ಅದು ಸಮಿತಿಗೆ ಹೋಗುತ್ತದೆ.

ಶ್ರೀ ಎ. ರಾಮದಾಸ್:– ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳುತ್ತಿಲ್ಲ. ಕಳೆದ ನಾಲ್ಕು ದಿವಸಗಳ ಹಿಂದೆ ನಾನು ಶೂನ್ಯ ವೇಳೆಯಲ್ಲಿ ನಗರಾಭಿವೃದ್ಧಿ ಸಚಿವರನ್ನು ಉತ್ತರ ಕೊಡಬೇಕೆಂದು ಕೇಳಿದ್ದೆ. ನಾನು ಪ್ರಶ್ನೆ ಕೇಳುತ್ತಿಲ್ಲ. ಅದನ್ನು ತಮಗೆ ನೆನಪು ಮಾಡುತ್ತಿದ್ದೇನೆ. ಅಷ್ಟೆ. ಮಂತ್ರಿಗಳು ಇದ್ದಾರೆ ಅವರಿಂದ ಉತ್ತರ ಕೊಡಿಸಿಕೊಡಿ. ಬೆಳಿಗ್ಗೆಯೇ ತಮ್ಮನ್ನು ಕೇಳಿದೆ. ತಾವು ಫೋನ್ ಮಾಡಿ ಕೂಡ ಹೇಳಿದಿರಿ.

ಅಧ್ಯಕ್ಷರು:– ಇನ್ನು ಎರಡು ಮೂರು ದಿವಸ ಸದನ ಸೇರುತ್ತದೆ ಉತ್ತರ ಕೊಡುತ್ತಾರೆ. ಬಿಡಿ. ಖಾಸಗಿ ಸದಸ್ಯರ ವಿಧೇಯಕವನ್ನು ಮಂಡಿಸಲಿ.

9) ಖಾಸಗಿ ಸದಸ್ಯರ ಕಾರ್ಯಕಲಾಪಗಳು (ವಿಧೇಯಕದ ಮಂಡನೆ)

ಅ) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2002. ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ.ಬಿ. ಮಲ್ಲಿಕಾರ್ಜುನ(ಬೀರೂರು):– ಮಾನ್ಯ ಅಧ್ಯಕ್ಷರೆ, "2002ನೇ ಸಾಲಿನ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ, 2002ನೇ ಸಾಲಿನ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:– ಮಾನ್ಯ ಅಧ್ಯಕ್ಷರೆ, 2002ನೇ ಸಾಲಿನ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಅನುಬಂಧ ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ

6.40 ಪಿ.ಎಂ

ಅಧ್ಯಕ್ಷರು:– ಶೆಟ್ಟರ್‌ರವರದ್ದು ಆದ ಮೇಲೆ ಸಂಪಂಗಿಯವರು ಮಾತನಾಡುತ್ತಾರೆ. ವಿರೋಧ ಪಕ್ಷದ ನಾಯಕರಿಗೆ ನಾನು ಮೊದಲು ಅವಕಾಶ ಕೊಡಬೇಕಾಗುತ್ತದೆ. ಶೆಟ್ಟರ್‌ರವರೇ ಮಾತನಾಡಿ.